**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 536/2023**

ಚಾ.ಸಾ–01, ಪ್ರಾ.ಸಾ–01

| | | |
|---|---|---|
| ಹೆಸರು | : | ದೇವರಸನಾಯಕ |
| ತಂದೆಯ ಹೆಸರು | : | ರಾಚನಾಯಕ |
| ವಯಸ್ಸು | : | 55 |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಆಲಗೋಡು ಗ್ರಾಮ, |

**ದಿನಾಂಕ 06.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನನಗೆ ಚಾಸಾ 2 ಮತ್ತು 3 ಪರಿಚಯವಿಲ್ಲ ಚಾಸಾ 4 ನನ್ನ ಹೆಂಡತಿ. ಚಾಸಾ 5 ಮತ್ತು 6 ಪರಿಚಯವಿದೆ. ಆರೋಪಿ ಪರಿಚಯವಿಲ್ಲ ಆದರೆ ನಾನು ಆತನನ್ನು ನೋಡಿರುತ್ತೇನೆ.

ದಿಃ 27.10.2023 ರಲ್ಲಿ ಆಲಗೋಡು ಬಸ್ ಸ್ಟಾಪ್ ನ ಕೋಳಿ ಅಂಗಡಿ ಹತ್ತಿರ ನನ್ನ ಸಂಬಂಧಿಕರು ಮರಣ ಹೊಂದಿದ್ದರಿಂದ ಅವರನ್ನು ನೋಡಲು ಅಂತ ಹೋಗಿ ಟೀ ಕುಡಿಯಲು ಅಂತ ಹೋಗಿದ್ದು, ಟೀ ಅಂಗಡಿ ಮುಚ್ಚಿದ್ದು, ಕೋಳಿ ಅಂಗಡಿ ಹತ್ತಿರ ನಿಂತಿದ್ದೆ. ಅಲ್ಲಿ ಆರೋಪಿ ಬಂದು ನನಗೆ ಬೀಡಿ ಇದ್ದರೆ ಕೊಂಡು ಎಂದು ಹೇಳಿದ ನಾನು ಇಲ್ಲ ಎಂದು ಹೇಳಿದೆ. ಅದಕ್ಕೆ ಆತ ನನ್ನ ಕಾಲರ್ ಪಟ್ಟಿಯನ್ನು ಹಿಡಿದುಕೊಂಡು ನನ್ನ ಮುಖಕ್ಕೆ ಕೈಯಿಂದ ಗುದ್ದಿದ. ನಂತರ ಟೈಲ್ಸ್ ಕಲ್ಲು ತೆಗೆದುಕೊಂಡು ನನ್ನ ಮುಖಕ್ಕೆ, ಹಣೆಗೆ, ತಲೆಗೆ ಹೊಡೆದ. ನನ್ನ ಬಾಯಿಂದ ಮತ್ತು ತಲೆಯಿಂದ ರಕ್ತ ಸೋರಿತು. ಆಗ ನಾನು ಕೂಗಿಕೊಂಡೆ. ಆರೋಪಿ ಓಡಿಹೋದ

ಆಗ ಚಾಸಾ 2 ಬಂದು ನನ್ನ ಹೆಂಡತಿಯನ್ನು ಕರೆದುಕೊಂಡು ಬಂದು, ಆಟೋದಲ್ಲಿ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಯಿಂದ ಠಾಣೆಗೆ ಹೋಗಿ ಆರೋಪಿ ವಿರುದ್ಧ ದೂರು ನೀಡಿದೆ.

ಈಗ ನಾನು ನೋಡುತ್ತಿರುವ ದೂರಿನಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಇದ್ದು ಸದರಿ ದೂರನ್ನು ನಿಪಿ 1 ಎಂದು ಗುರುತಿಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿ ಯನ್ನು ನೋಡಿ ಗುರುತಿಸುತ್ತೇನೆ. ಈಗ ನನಗೆ ತೋರಿಸುತ್ತಿರುವ ಟೈಲ್ಸ್ ಕಲ್ಲು ನಾನು ಗುರುತಿಸುತ್ತಿದ್ದು ಅದರಿಂದಲೇ ಆರೋಪಿ ನನಗೆ ಹೊಡೆದಿರುತ್ತಾನೆ. ಸದರಿ ಕಲ್ಲನ್ನು ಎಂ ಓ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು ಪಾಟೀಸವಾಲನ್ನು ಮೂಂದೂಡಲಾಯಿತು.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**